ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**C.C.4651/2024. PW1.**

ದಿನಾಂಕಃ**24.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ಶ್ರೀ ಹೆಚ್ ಹೆಚ್ ವಕೀಲರಿಂದಃ-

ದಿಃ05.01.2023 ರಂದು ಆರೋಪಿ 2 ಲಕ್ಷ ನಗಧನ್ನು ಪೊಲೀಸ್ ವಸತಿಗೃಹದಲ್ಲಿ ಸು.ಬೆಳಗ್ಗೆ 9 ರಿಂದ 10 ಗಂಟೆಯಲ್ಲಿ ನೀಡಿರುತ್ತೇನೆ. ಸದರಿ 2 ಲಕ್ಷವನ್ನು ಆರೋಪಿಗೆ ನೀಡಿದ್ದೇನೆ ಎಂದು ತೋರಿಸಲು ದಾಖಲೆ ಇಲ್ಲ. ಸಾಕ್ಷಿ ಮುಂದುವರೆದು ನನ್ನ ಮಾವ ಭತ್ತ ಬೆಳೆದಿದ್ದ ಹಣವನ್ನು ನನ್ನ ಖಾತೆಗೆ ಹಾಕಿದ್ದು ನಾನು ಹಿಂದಿನ ದಿನ ಸದರಿ ಹಣವನ್ನು ಡ್ರಾ ಮಾಡಿ ಇಟ್ಟಿದ್ದೆ ಎನ್ನುತ್ತಾರೆ. ನನ್ನ ಮಾವ ನನ್ನ ಖಾತೆಗೆ ಹಾಕಿದ ಬಗ್ಗೆ ಹಾಗೂ ನಾನು ನನ್ನ ಖಾತೆಯಿಂದ ಹಣ ಡ್ರಾ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಲು ಬ್ಯಾಂಕ್ ನವರನ್ನು ವಿಚಾರಿಸುತ್ತೇನೆ. ಆ ಸಂಬಂಧ ನನ್ನ ಪಾಸ್ ಪುಸ್ತಕವನ್ನು ಹಾಜರುಪಡಿಸುತ್ತೇನೆ.

ದಿಃ05.01.2023 ರಂದು ಮನೆಯಲ್ಲಿ ಇರದೆ ಠಾಣೆಯಲ್ಲಿ ಇದ್ದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಹಣ ಕೊಟ್ಟ ನಂತರ ಕೆಲಸಕ್ಕೆ ಹೋಗಿರುತ್ತೇನೆ ಎನ್ನುತ್ತಾರೆ. ಆರೋಪಿಯು ಮನೆಗೆ ಬಂದಿರಲ್ಲಿ ಹಾಗೂ ನನ್ನಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ05.10.2024 ರಂದು ಚೆಕ್ ಅನ್ನು ಠಾಣೆಯಲ್ಲಿ ಕೊಟ್ಟಿರುತ್ತಾರೆ. ಸದರಿ ವೇಳೆಯಲ್ಲಿ ಚೆಕ್ಕಿನ ಒಕ್ಕಣೆಯನ್ನು ಬರೆದಿದ್ದು ನನ್ನ ಮುಂದೆ ಸಹಿ ಮಾಡಿ ಕೊಟ್ಟಿರುತ್ತಾರೆ.

ಈ ಹಂತದಲ್ಲಿ ಪ್ರಕರಣವು ರಾಜಿಗೆ ಸೂಕ್ತವೆಂದು ಪರಿಗಣಿಸಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.